# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮಂಡ್ಯದ ಶಂಕರೇಗೌಡ ಶಿಕ್ಷಣ ಕಾಲೇಜಿಗೆ ಅನುದಾನ ಮಂಜೂರಾತಿ.

ಓದಲಾಗಿದೆ:-

1) ತಾ:20-4-1993 ಸಂಖ್ಯೆ: ಇಡಿ 112 ಎಯುಬಿಸಿ 90 ರ ಸರ್ಕಾರಿ ಆದೇಶ.
2) ತಾ:2-7-1993 ರ ಮಂಡ್ಯದ ಜನತಾ ಶಿಕ್ಷಣ ಟ್ರಸ್ಟಿನ ಅಧ್ಯಕ್ಷರ ಪತ್ರ.
3) ತಾ:31-7-1993 ಸಂಖ್ಯೆ: ತರಬೇತಿ-3:ಅನುದಾನ-2:93-94 ರ ಸಾರ್ವಜನಿಕ ನಿರ್ದೇಶಕರ (ಸಂಶೋಧನೆ ಮತ್ತು ತರಬೇತಿ) ಪತ್ರ.

ಪ್ರಸ್ತಾವನೆ:-

ತಾ: 20-4-1993 ರ ಸರ್ಕಾರಿ ಆದೇಶದಲ್ಲಿ ಮಂಡ್ಯದ ಶಂಕರೇಗೌಡ ಶಿಕ್ಷಣ ಕಾಲೇಜಿಗೆ ತಾ:1-4-1993 ರಿಂದ ಜಾರಿಗೆ ಬರುವಂತೆ ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಶಿಕ್ಷಣ ಕಾಲೇಜುಗಳಿಗೆ ಅನ್ವಯಿಸುವ ಅನುದಾನ ಸಂಹಿತೆ ಪ್ರಕಾರ ಕಾಲೇಜಿನ ಸ್ಥಿರ ಆಸ್ತಿಗಳನ್ನು ಸರ್ಕಾರಕ್ಕೆ ಅಡಮಾನ ಮಾಡಿಕೊಡಲಾಗಿದೆ. ಈ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ನೌಕರರು : ಉಚಿತ ಮಾದರಿ ನಿಗದಿತ ನಮೂನೆಯಲ್ಲಿ ಒಪ್ಪಂದ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಸಮಿತಿಯಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವುದಾಗಿ ಕಾಲೇಜು ತಿಳಿಸಿದ್ದು, ಈ ವಿಷಯದಲ್ಲಿ ಸಾರ್ವಜನಿಕ ಶಿಕ್ಷಣ ನಿರ್ದೇಶಕರಿಂದ ವರದಿ ಪಡೆಯಲಾಗಿದೆ.

2. ಈ ಪ್ರಸ್ತಾವನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಸಲ್ಲಿಸಿರುವ ವರದಿಯ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 42 ಎಯುಬಿಸಿ 93, ಬೆಂಗಳೂರು, ದಿನಾಂಕ: 2ನೇ ಸೆಪ್ಟೆಂಬರ 1993

3. ಶಿಕ್ಷಣ ಕಾಲೇಜುಗಳಿಗೆ ಅನ್ವಯಿಸುವ ಅನುದಾನ ಸಂಹಿತೆಯಲ್ಲಿ ರೂಪಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ತಾ : 1-4-1993 ರಿಂದ ಪರಿಣಮಿಸುವಂತೆ ಮಂಡ್ಯದ ಶಂಕರೇಗೌಡ ಶಿಕ್ಷಣ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಗೆ ನಮೂದಿಸಿರುವ ಸಿಬ್ಬಂದಿಯ ವೇತನಾನುದಾನವನ್ನು ಬಟವಾಡೆ ಮಾಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ನೀಡಲಾಗಿದೆ :-

(1) ಕಾರ್ಯಭಾರ ಮತ್ತು ಸಿಬ್ಬಂದಿಗೆ ಅನುಗುಣವಾಗಿ ಪ್ರಾಂಶುಪಾಲರನ್ನೊಳಗೊಂಡು 8 ಶಿಕ್ಷಕರ ಮತ್ತು 10 ಶಿಕ್ಷಕೇತರ ಸದರಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿರುವ ನೌಕರರನ್ನು ವೇತನಾನುದಾನ ವ್ಯಾಪ್ತಿಗೆ ಒಳಪಡಿಸಲಾಗಿದೆ.

(2) ಇನ್ನು ಮುಂದೆ ಭವಿಷ್ಯನುಸಾರ ಭರ್ತಿ ಮಾಡಲಾಗುವ ಹುದ್ದೆಗಳಿಗೆ ಸಂಬಂಧಿಸಿದ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಬೇಕು.

(3) ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಚಾರದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(4) ವಿದ್ಯಾರ್ಥಿಗಳ ಪ್ರವೇಶದಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ನಿಖರವಾಗಿ ಅನುಸರಿಸಬೇಕು.

(5) ಈಗ ಅನುಮೋದಿಸಿರುವ ಸಿಬ್ಬಂದಿಯ ವಿದ್ಯಾರ್ಹತೆ ಇತ್ಯಾದಿಗಳನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶಕರು (ಸಂಶೋಧನೆ ಮತ್ತು ತರಬೇತಿ) ರವರು ಮತ್ತೆ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಯೊಂದಿಗೆ ದೃಢೀಕರಿಸಿಕೊಳ್ಳಬೇಕು.

(6) ಈಗ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದಲೇ ಭರ್ತಿ ಮಾಡತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸದಿದ್ದಲ್ಲಿ ಕಾಲೇಜಿಗೆ ನೀಡಲಾಗುವ ಅನುದಾನವನ್ನು ಹಿಂತೆಗೆದುಕೊಳ್ಳಲಾಗುವುದು ಅಥವಾ ರದ್ದುಗೊಳಿಸಲಾಗುವುದು.

ಮುಂದುವರೆದಿದೆ....2

೫. ವೇತನಾನುದಾನಕ್ಕೆ ಅರ್ಹರಾದ ನೌಕರರ ವಿವರ ಈ ಕೆಳಕಂಡಂತಿದೆ :—

| ಕ್ರಮ ಸಂಖ್ಯೆ | ನೌಕರರ ಹೆಸರು | ಹೊಂದಿರುವ ಹುದ್ದೆಯ ಪದನಾಮ | ಸೇವೆಗೆ ಸೇರಿದ ದಿನಾಂಕ |
|---|---|---|---|
| | ಶ್ರೀಯುತರು | ಬೋಧಕರು | |
| 1. | ಕೆ.ನಂಜಯ್ಯ | ಪ್ರಾಂಶುಪಾಲರು | 1-8-1974 |
| 2. | ಎನ್.ಪ್ರಹ್ಲಾದ | ರೀಡರ್ | 8-8-1974 |
| 3. | ಎಂ.ಆರ್.ಜಯಪ್ರಕಾಶ | ಉಪನ್ಯಾಸಕ | 14-8-1976 |
| 4. | ವಿ.ಕೆ.ಕೃಷ್ಣಪ್ಪ | ಉಪನ್ಯಾಸಕ | 18-8-1978 |
| 5. | ಎಸ್.ಬಿ.ಶಂಕರಗೌಡ | ಉಪನ್ಯಾಸಕ | 18-8-1978 |
| 6. | ಕೆ.ಎಸ್.ಚಂದ್ರ | ಉಪನ್ಯಾಸಕ | 14-8-1983 |
| 7. | ಪಿ.ಉಮಾದೇವಿ | ಉಪನ್ಯಾಸಕಿ | 27-8-1983 |
| 8. | ಎಂ.ಕೆ.ನಾಗರಾಜ | ದೈಹಿಕ ಶಿಕ್ಷಣ ನಿರ್ದೇಶಕ | 7-10-1974 |
| | | ಬೋಧಕೇತರರು | |
| 1. | ಸಿ.ಎಂ.ಪ್ರೇಮಲತ | ಗ್ರಂಥಾಧಿಕಾರಿ | 3-11-1982 |
| 2. | ಎಂ.ಇ.ನಾಗೇಂದ್ರಪ್ಪ | ಪ್ರಥಮ ದರ್ಜೆ ಸಹಾಯಕ | 19-8-1974 |
| 3. | ಕೆ.ಎಂ.ಕೃಷ್ಣೇಗೌಡ | ಪ್ರಥಮ ದರ್ಜೆ ಸಹಾಯಕ | 4-8-1982 |
| 4. | ಹೆಚ್.ರಾಮದಾಸ | ಎಸ್‌ಡಿಎ-ಕಂ-ಬೆರಳಚ್ಚುಗಾರ | 5-8-1974 |
| 5. | ಸಿ.ಸಣ್ಣಯ್ಯ | ಅಟೆಂಡರ್ | 10-8-1974 |
| 6. | ಹೆಚ್.ಜಿ.ಬಸವರಾಜು | ಅಟೆಂಡರ್ | 9-6-1976 |
| 7. | ಹೆಚ್.ಎನ್.ಲಲಿತ | ಜವಾನ | 15-2-1977 |
| 8. | ಬೊಮ್ಮಯ್ಯ | ಜವಾನ | 20-2-1980 |
| 9. | ಹೆಚ್.ಬಿ.ಶಿವಣ್ಣ | ಕಾವಲುಗಾರ | 11-10-1983 |
| 10. | ವೀರಮ್ಮ | ಸ್ಕ್ಯಾವೆಂಜರ್ | 10-1-1978 |

೬. ಮೇಲ್ಕಂಡ ಕಾಲೇಜಿಗೆ ಅನುದಾನ ಮಂಜೂರು ಮಾಡುವುದರಿಂದ ಉಂಟಾಗುವ ವೆಚ್ಚವನ್ನು "2202-ಸಾಮಾನ್ಯ ಶಿಕ್ಷಣ-03-ವಿಶ್ವವಿದ್ಯಾಲಯ ಮತ್ತು ಇತರ ಉಚ್ಚ ಶಿಕ್ಷಣ-104:ಸರ್ಕಾರೇತರ ಕಾಲೇಜುಗಳಿಗೆ ಮತ್ತು ಸಂಸ್ಥೆಗಳಿಗೆ ಸಹಾಯ-2 ಶಿಕ್ಷಕರ ತರಬೇತಿ ಕಾಲೇಜುಗಳು-01-ನಿರ್ವಹಣೆ-101 ಸಹಾಯಾನುದಾನ (ಯೋಜನೆ)" ಶೀರ್ಷಿಕೆಯಡಿ ಪ್ರಸಕ್ತ 1993-94 ನೇ ಸಾಲಿನಿಂದ ಭರಿಸತಕ್ಕದ್ದು. ಈ ಉದ್ದೇಶಕ್ಕಾಗಿ ತಾ: 12-4-1993 ಸಂಖ್ಯೆ: ಎಫ್‌ಡಿ 722 ವೆಚ್ಚ (8) 93 ರ ಸರ್ಕಾರಿ ಆದೇಶದಲ್ಲಿ 16 ನೇ ಸಂಖ್ಯೆಯ ಅನುದಾನದಡಿ 1993-94 ನೇ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಮರು ಹೊಂದಾಣಿಕೆ ಮಾಡಿ 24 ಲಕ್ಷ ರೂ.ಗಳನ್ನು ವಿತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ರಾ.ಸ.ರಾಮಸಂಜೀವಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

PRINCIPAL
Shankaragowda College of Education
Mandya - 571 401

ಇವರಿಗೆ:

1) ಮಹಾಲೇಖಪಾಲರು, (ಎ ಮತ್ತು ಇ) (ಪರಿಶೋಧನೆ) (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2) ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು.
3) ಸಾರ್ವಜನಿಕ ಶಿಕ್ಷಣ ನಿರ್ದೇಶಕರು (ಸಂಶೋಧನೆ ಮತ್ತು ತರಬೇತಿ) ಬಿ.ಪಿ.ವಾಡಿಯಾ ರಸ್ತೆ, ಬೆಂಗಳೂರು.
4) ಅಧ್ಯಕ್ಷರು, ಜನತಾ ಶಿಕ್ಷಣ ಟ್ರಸ್ಟ್, ಮಂಡ್ಯ - 571 401.
5) ಪ್ರಾಂಶುಪಾಲರು, ಶಂಕರೇಗೌಡ ಕಾಲೇಜು, ಮಂಡ್ಯ - 571 401.
6) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-8) ಯೋಜನಾ ಇಲಾಖೆ (ಪಿಪಿ-1).
7) ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ : ಕಾಲೇಜು ಶಿಕ್ಷಣ).